# ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ

**ಸಿ ಸಿ ನಂಃ 90/2020**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ ಪರವಾಗಿ
ಹೊನ್ನಾವರ.

**– ವಿರುದ್ಧ –**

ಆರೋಪಿತರುಃ 1. ಸಜ್ಜಾದ ಅಹ್ಮದ ತಂದೆ ಕುತುಬುದ್ದೀನ್ ಗನಿ,
ವಯಸ್ಸುಃ 28 ವರ್ಷಗಳು,
ಉದ್ಯೋಗಃ ಅಡಿಕೆ ವ್ಯಾಪಾರ,

2. ಮುಬಾಸೀರ ತಂದೆ ಕುತುಬುದ್ದೀನ್ ಗನಿ,
ವಯಸ್ಸುಃ 30 ವರ್ಷಗಳು,
ಉದ್ಯೋಗಃ ಇಲೆಕ್ಟ್ರಿಷೀಯನ್,

ಇಬ್ಬರೂ ವಾಸ್ತವ್ಯಃ ತೊಹಿದ ಮುಲ್ಲಾ, ಚಂದಾವರ.

**ದೋಷಾರೋಪಣೆ**

ಶ್ರೀ ಕುಮಾರ ಜಿ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

1) ಮೊದಲನೆಯದಾಗಿ ಆರೋಪಿಗಳಾದ ನೀವು ದಿನಾಂಕಃ 21-06-2019 ರಂದು ಮಧ್ಯರಾತ್ರಿ 01-00 ಗಂಟೆಯ ಸುಮಾರಿಗೆ ಹೊನ್ನಾವರ ಪೋಲೀಸ್ ಠಾಣಾ ಸರಹದ್ದಿನಲ್ಲಿರುವ ಹೊನ್ನಾವರ ತಾಲ್ಲೂಕಿನ ಕಲ್ಲೆ ಹೆಬ್ಬಾರ್ನ ಕೇರೆ ಚಾಸಾ-1 ಬಾಲಚಂದ್ರ ಗಣಪತಿ ಹೆಗಡೆಯವರ ವಾಸದ ಮನೆಯಲ್ಲಿ ಯಾರು ಇಲ್ಲದ ವೇಳೆಯಲ್ಲಿ ಮನೆಯ ಕಿಡಕಿಗೆ ಅಳವಡಿಸಿದ ಕಬ್ಬಿಣದ ಗ್ರಿಲ್ಸ್‌ನ್ನು ಕಬ್ಬಿಣದ ರಾಡಗಳಿಂದ ಮುರಿದು ಕಳ್ಳತನ ಮಾಡುವ ಉದ್ದೇಶದಿಂದ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ಭಾರತೀಯ ಕಂಡ ಸಂಹಿತೆ ಕಲಂ 457 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2) ಕೊನೇಯದಾಗಿ ಮೇಲ್ಕಂಡ ದಿನಾಂಕ , ಸ್ಥಳ ಹಾಗೂ ಸಮಯದಲ್ಲಿ ಮೇಲೆ ಹೇಳಿದ ವಿಷಯಕ್ಕೆ ಸಂಬಂಧಿಸಿದಂತೆ ನೀವುಗಳು ಮನೆಯೊಳಗಡೆ ಅತಿಕ್ರಮ ಪ್ರವೇಶ ಮಾಡಿ ಬೆಡ್ ರೂಮಿನಲ್ಲಿ ಇಟ್ಟಿದ್ದ ಗೊದ್ರೇಜ್ ಕಪಾಟನ್ನು ತೆಗೆದು ಲಾಕರನಲ್ಲಿ ಇಟ್ಟಿದ್ದ ಸುಮಾರು ರೂಪಾಯಿ 1,20,775/- ಬೆಲೆಯ 48.310 ಗ್ರಾಂ ತೂಕದ ಬಂಗಾರದ ಆಭರಣಗಳು (ಒಂದು ಮಂಗಳಸೂತ್ರ, ಎರಡು ಪವನಗಳು ಮತ್ತು ಒಂದು ಜೊತೆ ಕಿವಿಯೊಲೆ) ಕಳ್ಳತನ ಮಾಡಿ ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ .

ಪ್ರಶ್ನೆಃ 1. ಈಗ ಓದಿ ಹೇಳಿದ ದೋಷರೋಪಣೆಯು ನಿಮಗೆ ತಿಳಿಯಿತೇ?

ಆರೋಪಿಯ ಉತ್ತರಃ

ಪ್ರಶ್ನೆಃ 2. ಸದರಿ ಆಪಾದನೆಯನ್ನ ನೀವು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೊ?

ಆರೋಪಿಯ ಉತ್ತರಃ

(ಸದರಿ ದೋಷರೋಪಣೆಯು ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಆತ ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

ದಿನಾಂಕಃ24-09-2021.
ಸ್ಥಳಃ ಹೊನ್ನಾವರ.

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ಕಂಡಾಧಿಕಾರಿಗಳು, ಹೊನ್ನಾವರ.**